# Karnataka Public Service Commission
# ಕರ್ನಾಟಕ ಲೋಕ ಸೇವಾ ಆಯೋಗ

Your Machine IP Address : **106.216.232.125**
Logged in as **Manjunatha**

| | | | | | |
|---|---|---|---|---|---|
| Home<br>ಹೊಮ್ ಸ್ಕ್ರೀನ್ | Applicant Detail Registration<br>ಅರ್ಜಿದಾರರ ನೋಂದಣಿ ವಿವರ | Apply to Post<br>ಹುದ್ದೆಗೆ ಅರ್ಜಿ ಸಲ್ಲಿಸಿ | Applied Posts<br>ಅರ್ಜಿ ಸಲ್ಲಿಸಿರುವ ಹುದ್ದೆಗಳು | Deleted Applications<br>ಅಳಿಸಲಾದ ಅಪ್ಲಿಕೇಶನ್‌ಗಳು | Admit Card<br>ಪ್ರವೇಶ ಪತ್ರ |
| Help desk<br>ಸಹಾಯವಾಣಿ ಕೇಂದ್ರ | Kannada Certificate<br>ಕನ್ನಡ ಪ್ರಮಾಣಪತ್ರ | 20230900019834 | | | |

**Note: Check your Submitted Application Status in the Applied Posts Tab. / ಅಪ್ಲೈಡ್ ಪೋಸ್ಟ್ ವಿಭಾಗದಲ್ಲಿ ನೀವು ಸಲ್ಲಿಸಿದ ಅರ್ಜಿಯ ವಿವರಗಳನ್ನು ಪರಿಶೀಲಿಸಬಹುದು.**

Home > Applicant Admit Card

KPSC Notification Details / ಅಧಿಸೂಚನೆ ವಿವರಗಳು

KPSC Notification Number / **ಅಧಿಸೂಚನೆ ಸಂಖ್ಯೆ***

ಪಿಎಸ್‌ಸಿ /509 ಇ(1) /2023-24

Exam Date / **ಪರೀಕ್ಷೆಯ ದಿನಾಂಕ ***

29/12/2024

Download Admit Card/ಡೌನ್ ಲೋಡ್ ಪ್ರವೇಶ ಪತ್ರ

Admit Card

Print

-

## ಕರ್ನಾಟಕ ಲೋಕಸೇವಾ ಆಯೋಗ

**ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 509 ಇ (1) /2023-24, ದಿನಾಂಕ:26-02-2024ರಲ್ಲಿ ಅಧಿಸೂಚಿಸಲಾದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಬಿ ವೃಂದದ 384 ಹುದ್ದೆಗಳ ಪೂರ್ವಭಾವಿ ಮರುಪರೀಕ್ಷೆ.**

## ಅಭ್ಯರ್ಥಿಗಳಿಗೆ /ಲಿಪಿಕಾರರಿಗೆ ಸೂಚನೆಗಳು

**ಅಭ್ಯರ್ಥಿಗಳು/ಲಿಪಿಕಾರರು ಈ ಕೆಳಗಿನ ಪರೀಕ್ಷಾ ಸೂಚನೆಗಳನ್ನು ಸಂಪೂರ್ಣವಾಗಿ ಓದುವುದು ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.**

1. **ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕಾಗಿರುವ ಸಮಯ:-** ಅಭ್ಯರ್ಥಿಗಳು ಪರೀಕ್ಷೆ ಆರಂಭವಾಗುವುದಕ್ಕಿಂತ ಎರಡು ಗಂಟೆ ಮುಂಚಿತವಾಗಿ ಪರೀಕ್ಷಾ ಉಪಕೇಂದ್ರದ ಬಳಿ ಕಡ್ಡಾಯವಾಗಿ ಹಾಜರಿರತಕ್ಕದ್ದು. ಪರೀಕ್ಷೆಗೆ ಬೆಳಗಿನ ಅಧಿವೇಶನಕ್ಕೆ ಬೆಳಿಗ್ಗೆ 8.00ರ ಒಳಗೆ ಹಾಗೂ ಮಧ್ಯಾಹ್ನ 12:00 ಗಂಟೆಯೊಳಗೆ ಹಾಜರಿರಬೇಕು. ಬೆಳಗಿನ ಅಧಿವೇಶನಕ್ಕೆ 9:50ರ ನಂತರ ಮತ್ತು ಮಧ್ಯಾಹ್ನದ ಅಧಿವೇಶನಕ್ಕೆ 1:50 ರ ನಂತರ ಬರುವ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದಿಲ್ಲ.

2. ಗುರುತು ಪತ್ತೆ ಹಚ್ಚಲು ಸಾಧ್ಯವಾಗದ ರೀತಿಯಲ್ಲಿ ವಸ್ತ್ರ ಧರಿಸಿ ಪರೀಕ್ಷೆಗೆ ಹಾಜರಾಗುವಅಭ್ಯರ್ಥಿಗಳು, ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್ ನಡೆಸುವ ಸಿಬ್ಬಂದಿಯೊಂದಿಗೆ ಮತ್ತು ಪರೀಕ್ಷಾ ಕೊಠಡಿಯ ಸಂವೀಕ್ಷಕರೊಂದಿಗೆ ಸಹಕರಿಸಿ ತಪಾಸಣೆಗೊಳಗಾಗುವುದು ಕಡ್ಡಾಯವಾಗಿರುತ್ತದೆ. ತಪಾಸಣೆಯನ್ನು ನಿರಾಕರಿಸಿದಲ್ಲಿ ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗುವುದಿಲ್ಲ.

3. ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳು ಆಯೋಗವು ನಡೆಸುವ Hand Held Metal Detector ತಪಾಸಣೆಗೆ (FRISKING) ಒಳಗಾಗುವುದು ಕಡ್ಡಾಯವಾಗಿರುತ್ತದೆ. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳು ಒಂದೊಮ್ಮೆ Wash Room ಗೆ ಹೋಗಿಬಂದಲ್ಲಿ ಪುನ: ತಪಾಸಣೆಗೆ (FRISKING) ಒಳಗಾಗಿಯೇ ಕೊಠಡಿ ಪ್ರವೇಶಿಸಲು ಅನುಮತಿಸಲಾಗುವುದು.

4. Metal Water Bottles or Non Transparent Water Bottle ಗಳನ್ನು ಪರೀಕ್ಷಾ ಕೊಠಡಿಯೊಳಗೆ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ. ಕಿವಿ, ಬಾಯಿಯನ್ನು ಮುಚ್ಚಿಕೊಳ್ಳುವಂತೆ ಅಥವಾ ಯಾವುದೇ ರೀತಿಯ Filter ಇರುವ ಫೇಸ್ ಮಾಸ್ಕ್ ಧರಿಸಿ ಪರೀಕ್ಷಾ ಕೊಠಡಿ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

5. ಅಭ್ಯರ್ಥಿಗಳು ತರುವ ಯಾವುದೇ ವಸ್ತುಗಳು ಬ್ಯಾಗ್, ಫೋನ್ ಇನ್ನಿತರೆ ವೈಯಕ್ತಿಕ ಅಮೂಲ್ಯ ವಸ್ತುಗಳನ್ನು ಪರೀಕ್ಷಾ ಉಪ ಕೇಂದ್ರದಲ್ಲಿ ಭದ್ರವಾಗಿ ಇಡಲು ಯಾವುದೇ ವ್ಯವಸ್ಥೆ ಇರುವುದಿಲ್ಲ ಹಾಗೂ ಇದಕ್ಕೆ ಪರೀಕ್ಷಾ ಉಪಕೇಂದ್ರದವರು ಜವಾಬ್ದಾರರಾಗುವುದಿಲ್ಲ.

6. ಅಭ್ಯರ್ಥಿಗಳು ಮೊಬೈಲ್ / ಸೆಲ್ಯೂಲಾರ್ ಫೋನ್, ಟ್ಯಾಬ್ಲೆಟ್, ಪೆನ್ ಡ್ರೈವ್, ಬ್ಲೂ ಟೂತ್ ಡಿವೈಸ್, ಸ್ಮಾರ್ಟ್ ವಾಚ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಲಾಗ್ ಟೇಬಲ್ಸ್, ಕೈಚೀಲ, ಪರ್ಸ್, ನೋಟುಗಳು, ಚಾರ್ಟ್, ಬಿಡಿ ಹಾಳೆಗಳು ಅಥವಾ ರೆಕಾರ್ಡಿಂಗ್ ವಸ್ತುಗಳನ್ನೂಸೇರಿದಂತೆ ಇನ್ನಿತರೆ ಯಾವುದೇ ರೀತಿಯ ಉಪಕರಣಗಳನ್ನು ಅವರ ಬಳಿಯಲ್ಲಿಟ್ಟುಕೊಂಡಿಲ್ಲದಿರುವ ಬಗ್ಗೆ ಮತ್ತು ಮೈಯಲ್ಲಿ ಧರಿಸದಿರುವ ಬಗ್ಗೆ ಪರಿಶೀಲನೆಗೆ ಒಳಪಡಿಸಲಾಗುವುದು.

7. ಧಾರ್ಮಿಕ ಆಚರಣೆಗೆ ಸಂಬಂಧಿಸಿದ ವಸ್ತುಗಳನ್ನು ಧರಿಸಿರುವ ಅಭ್ಯರ್ಥಿಗಳು ಹಾಗೂ Hearing aid ಉಪಕರಣ ಧರಿಸಿರುವ ಅಭ್ಯರ್ಥಿಗಳು ವೈದ್ಯಕೀಯ ದಾಖಲೆಗಳೊಂದಿಗೆ ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆ ಮುಂಚಿತವಾಗಿ ಸಂಪೂರ್ಣ ವಿಶೇಷ ತಪಾಸಣೆಗೆ ಒಳಪಡಬೇಕಾಗಿರುತ್ತದೆ.

8. **ವಸ್ತ್ರ ಸಂಹಿತೆ (Dress Code):-**

ಅ) ತುಂಬು ತೋಳಿನ ಶರ್ಟ್/T.Shirt/Frills/ಪದರಗಳುಳ್ಳ (layered) ವಿವಿಧ ರೀತಿಯ ವಿನ್ಯಾಸವುಳ್ಳ ವಸ್ತ್ರಗಳನ್ನು ಧರಿಸುವುದನ್ನು ನಿಷೇಧಿಸಿದೆ ಹಾಗೂ ಸರಳ ಉಡುಪು ಧರಿಸಿ ಪರೀಕ್ಷೆಗೆ ಹಾಜರಾಗುವುದು.

ಆ) ಯಾವುದೇ ರೀತಿಯ ಆಭರಣಗಳನ್ನು (Metal and Non metal) ಧರಿಸುವಂತಿಲ್ಲ (ಮಂಗಳ ಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ)

ಇ) ಶೂ ಮತ್ತು ಸಾಕ್ಸ್ ಧರಿಸುವುದನ್ನು ನಿಷೇಧಿಸಿದೆ ಹಾಗೂ ಸರಳ ಚಪ್ಪಲಿಗಳನ್ನು ಧರಿಸಿ ಹಾಜರಾಗುವುದು.

9. **<u>ಅಭ್ಯರ್ಥಿಗಳು ಕಡ್ಡಾಯವಾಗಿ ತರಬೇಕಾದ ದಾಖಲೆಗಳು:-</u>**

ಅ) ಪರೀಕ್ಷೆಯ ಪ್ರವೇಶ ಪತ್ರ (Exam Admit Card)

ಆ)ಮೂಲ ಗುರುತಿನ ಚೀಟಿ **(original Identification card), Passport, PAN CARD, Voter ID, Aadhar-U.I.D., Govt.Employer Id. (or) Driving Licence** ಇವುಗಳಲ್ಲಿ ಯಾವುದಾದರೊಂದು ತರತಕ್ಕದ್ದು.

ಇ) **<u>ಪಾಸ್‌ಪೋರ್ಟ್/ಸ್ಟ್ಯಾಂಪ್ಅಳತೆಯ 2 ಭಾವಚಿತ್ರಗಳು (Photo).</u>**

ಈ) ಅಂಗವಿಕಲ ಅಭ್ಯರ್ಥಿಗಳು (Person With Disabilities Candidates) ನಿಗದಿತ ಅಂಗವಿಕಲ ಪ್ರಮಾಣ ಪತ್ರಗಳು.

10. ಅಭ್ಯರ್ಥಿಯು ಪ್ರವೇಶ ಪತ್ರವನ್ನು ಹಾಗೂ ಒಂದು ಗುರುತಿನ ಚೀಟಿಯನ್ನು ಹಾಜರುಪಡಿಸದಿದ್ದಲ್ಲಿ ಪರೀಕ್ಷೆಗೆ ಅನುಮತಿಸಲಾಗುವುದಿಲ್ಲ. (**<u>ನಕಲು ಪ್ರತಿ ಅಥವಾ ಸ್ಕ್ಯಾನ್ ಮಾಡಿರುವ ಪ್ರತಿಯನ್ನು ಅನುಮತಿಸಲಾಗುವುದಿಲ್ಲ</u>**)

11. ಪ್ರವೇಶ ಪತ್ರದ ಜೊತೆಗೆ ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನನ್ನುತರತಕ್ಕದ್ದು. Personalized / Non-Personalized ಒಎಂಆರ್ ಉತ್ತರ ಹಾಳೆಯಲ್ಲಿನ ಎಲ್ಲಾ ನಮೂದು (Marking) ಗಳನ್ನು **<u>ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ</u>** ಮಾಡತಕ್ಕದ್ದು.

12. ಪ್ರವೇಶ ಪತ್ರವನ್ನುಪಡೆದುಕೊಂಡ ಕೂಡಲೇ ಅದರಲ್ಲಿನ ವಿವರಗಳನ್ನು ಪರಿಶೀಲಿಸಿಕೊಳ್ಳುವುದು. ಪ್ರವೇಶ ಪತ್ರದಲ್ಲಿ ಭಾವಚಿತ್ರವು ಸ್ಪಷ್ಟವಾಗಿಲ್ಲದಿದ್ದಲ್ಲಿ ಅಥವಾ ಮುದ್ರಿತವಾಗದಿದ್ದಲ್ಲಿ ಪರೀಕ್ಷಾ ದಿನದಂದು **<u>ಅಭ್ಯರ್ಥಿಯು ಸಿಂಧುವಾದ ತನ್ನ ಗುರುತಿನ ಚೀಟಿಯ ಪ್ರತಿ, ಪ್ರವೇಶಪತ್ರದ ಪ್ರತಿ ಹಾಗೂ ಪಾಸ್‌ಪೋರ್ಟ್/ಸ್ಟ್ಯಾಂಪ್ಅಳತೆಯ 2 ಭಾವಚಿತ್ರಗಳನ್ನು ಕಡ್ಡಾಯವಾಗಿ ಸಂವೀಕ್ಷಕರಿಗೆ ನೀಡಿ ಒಂದು ಭಾವಚಿತ್ರವನ್ನು ನಾಮಿನಲ್ ರೋಲ್ ನಲ್ಲಿನ ನಿಗದಿತ ಅಂಕಣದಲ್ಲಿ ಮತ್ತು ಇನ್ನೊಂದು ಭಾವಚಿತ್ರವನ್ನು ಈ ಸಂಬಂಧ ಸಲ್ಲಿಸುವ ಮುಚ್ಚಳಿಕೆ ಪತ್ರದಲ್ಲಿ ಅಂಟಿಸಿ ದೃಢೀಕರಿಸುವುದು.</u>**

13. ಪತ್ರಿಕೆ-1 ಮತ್ತು ಪತ್ರಿಕೆ-2ರ ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯ ಪ್ರಶ್ನೆಗಳನ್ನೂ ಸಹ ನೋಡಿಕೊಂಡು ಪ್ರಶ್ನೆಯನ್ನು ಅರ್ಥೈಸಿ ಕೊಳ್ಳತಕ್ಕದ್ದು.

14. ಸ್ಪರ್ಧಾತ್ಮಕ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪತ್ರಿಕೆಯು ಗರಿಷ್ಠ 200 ಅಂಕಗಳೊಂದಿಗೆ 100 ಪ್ರಶ್ನೆಗಳನ್ನು ಒಳಗೊಂಡಿದ್ದು ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ 04 ಪರ್ಯಾಯ ಉತ್ತರಗಳಿದ್ದು ಅಭ್ಯರ್ಥಿಯು ತಪ್ಪು ಉತ್ತರ ನೀಡಿರುವ ಪ್ರತಿಯೊಂದು ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ 0.25 ಅಂಕಗಳನ್ನು (1/4 ರಷ್ಟು ಅಂಕಗಳನ್ನು) ಕಳೆಯಲಾಗುವುದು.

15. ಬ್ಲೇಡ್, ರಬ್ಬರ್ ಅಥವಾ ಬಿಳಿ ದ್ರವ (ವೈಟ್ನರ್) ಅನ್ನು ಉಪಯೋಗಿಸಿ ಯಾವುದೇ ತಿದ್ದುಪಡಿಯನ್ನು ಮಾಡಬಾರದು ಹಾಗೂ ಪೆನ್ಸಿಲ್‌ಗಳಿಂದ ಯಾವುದೇ ನಮೂದು/ ಎನ್‌ಕೋಡ್ ಮಾಡಿದ್ದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುಗೊಳಿಸಲಾಗುವುದು.

16. ಪ್ರಶ್ನೆ ಪತ್ರಿಕೆಗೆ ಉತ್ತರಿಸುವ ಮುನ್ನ ನಿಮ್ಮ ಪ್ರಶ್ನೆ ಪತ್ರಿಕೆ ಹಾಗೂ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಯಾವುದೇ ಮುದ್ರಣ ದೋಷ ಇಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. **ಯಾವುದೇ ದೋಷವಿದ್ದಲ್ಲಿ ಸಂವೀಕ್ಷಕರ ಗಮನಕ್ಕೆ ತರುವುದು**. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯಲ್ಲಿನ ಪುಟಗಳನ್ನು ಮತ್ತು ಒ.ಎಂ.ಆರ್.ಉತ್ತರ ಹಾಳೆಯನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆ ಪತ್ರಿಕೆ / ಒ.ಎಂ.ಆರ್.ಉತ್ತರ ಹಾಳೆಯನ್ನು ಉಪಯೋಗಿಸಿದ್ದಲ್ಲಿ ಇದಕ್ಕೆ **<u>ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.</u>**

17. ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಗೆ ಉತ್ತರಿಸುವ ಮುನ್ನ ತನಗೆ ಹಂಚಿಕೆಯಾದ Personalized ಒ.ಎಂ.ಆರ್.ಉತ್ತರ ಹಾಳೆಯು ತನ್ನದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಹಾಗಿಲ್ಲದೇ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ Personalized ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಒ.ಎಂ.ಆರ್.ಉತ್ತರ ಹಾಳೆಯನ್ನು ಅಸಿಂಧು ಎಂದು ಪರಿಗಣಿಸಲಾಗುವುದು.

18. **<u>ಅಭ್ಯರ್ಥಿಯು ಒ.ಎಂ.ಆರ್.ಉತ್ತರ ಹಾಳೆಯಲ್ಲಿ (Personalized ಆಗಲೀ ಅಥವಾ Non-Personalized ಆಗಲೀ) ಸಹಿ ಮಾಡಲು ಒದಗಿಸಿರುವ ಸ್ಥಳದಲ್ಲಿ ಮಾತ್ರವೇ ಕಡ್ಡಾಯವಾಗಿ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಸಹಿ ಮಾಡಬೇಕು. ಅಭ್ಯರ್ಥಿಯು ಸಹಿ ಮಾಡದಿದ್ದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುಗೊಳಿಸಲಾಗುವುದು</u>**.

19. ಅಭ್ಯರ್ಥಿಯು Non-Personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ನೋಂದಣಿ ಸಂಖ್ಯೆ ಮತ್ತು ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆದು, ಸಂಬಂಧಪಟ್ಟ ವೃತ್ತಗಳನ್ನು ಎನ್ ಕೋಡ್ ಮಾಡತಕ್ಕದ್ದು. ತಪ್ಪಿದಲ್ಲಿ, ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುಗೊಳಿಸಲಾಗುವುದು ಹಾಗೂ Non-Personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಮುಚ್ಚಳಿಕೆ ನೀಡತಕ್ಕದ್ದು.

20. ಅಭ್ಯರ್ಥಿಯು ನಾಮಿನಲ್ ರೋಲ್ ನಲ್ಲಿ ಮುದ್ರಿತವಾಗಿರುವ ತಮ್ಮ ಹೆಸರು, ಭಾವಚಿತ್ರ, ನೋಂದಣಿ ಸಂಖ್ಯೆ ಮತ್ತು ಇತರ ವಿವರಗಳನ್ನು ಖಚಿತಪಡಿಸಿಕೊಂಡು,ಪ್ರಶ್ನೆ ಪತ್ರಿಕೆಯ ಸಂಖ್ಯೆಯನ್ನು ಬರೆದು ಕಡ್ಡಾಯವಾಗಿ ನಮೂದಿಸಿದ ನಂತರವೇ **<u>ಅರ್ಜಿಯಲ್ಲಿರುವಂತೆ ಪೂರ್ಣ ಸಹಿ ಮಾಡತಕ್ಕದ್ದು.</u>**

21. Personalized ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆ ಪತ್ರಿಕೆ ಶ್ರೇಣಿ ಹಾಗೂ ಹಂಚಿಕೆಯಾಗಿರುವ ಪ್ರಶ್ನೆ ಪತ್ರಿಕೆಯಲ್ಲಿರುವ ಶ್ರೇಣಿಯು ಒಂದೇ ಆಗಿರುವುದೇ ಎಂಬುದನ್ನು ಪರಿಶೀಲಿಸಿಕೊಳ್ಳುವುದು. ವ್ಯತ್ಯಾಸವಿದ್ದಲ್ಲಿ ಕೊಠಡಿ ಸಂವೀಕ್ಷಕರ ಗಮನಕ್ಕೆ ತಂದು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆ ಪತ್ರಿಕೆಯ ಶ್ರೇಣಿಯುಳ್ಳ ಪ್ರಶ್ನೆ ಪತ್ರಿಕೆಯನ್ನು ಪಡೆದುಕೊಳ್ಳುವುದು.

22. Personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆ ಪತ್ರಿಕೆ ಶ್ರೇಣಿ ಮತ್ತು ನಾಮಿನಲ್ ರೋಲ್ ನಲ್ಲಿ ಮುದ್ರಿತವಾಗಿರುವ ಪ್ರಶ್ನೆ ಪತ್ರಿಕೆ ಶ್ರೇಣಿಯು ಒಂದೇ ಆಗಿರುವುದನ್ನು ಪರಿಶೀಲಿಸಿಕೊಳ್ಳುವುದು. ವ್ಯತ್ಯಾಸವಿದ್ದಲ್ಲಿ ಯಾವ ಪ್ರಶ್ನೆ ಪತ್ರಿಕೆ ಶ್ರೇಣಿಯಲ್ಲಿ ಉತ್ತರಿಸಲಾಗಿದೆ ಎಂಬುದರ ಬಗ್ಗೆ ಅಭ್ಯರ್ಥಿಯು ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.

23. ಉತ್ತರಿಸಿದ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಅಭ್ಯರ್ಥಿ ಮತ್ತು ಸಂವೀಕ್ಷಕರು ಇಬ್ಬರೂ ಸಹಿ ಮಾಡುವುದು ಕಡ್ಡಾಯವಾಗಿರುತ್ತದೆ.

24. **<u>ಉತ್ತರಿಸಿದ ಒ.ಎಂ.ಆರ್.ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ಹಿಂದಿರುಗಿಸುವ ಮುನ್ನ ಸ್ವತಃ ತಾವು ಸಹಿ ಮಾಡಿರುವ ಬಗ್ಗೆ ಹಾಗೂ ಸಂವೀಕ್ಷಕರು ಸಹಿ ಮಾಡಿರುವುದನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.</u>**

25. ಅಭ್ಯರ್ಥಿಯು ಪ್ರಶ್ನೆ ಪತ್ರಿಕೆ ಮತ್ತು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ನೀಡಲಾಗಿರುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. **<u>ಇಲ್ಲದಿದ್ದಲ್ಲಿ ಅಂತಹ ಒ.ಎಂ.ಆರ್.ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.</u>**

26. ಅಭ್ಯರ್ಥಿಯು ಕಾರ್ಬನ್ ರಹಿತ ಒ.ಎಂ.ಆರ್.ಉತ್ತರ ಹಾಳೆಯ ಪ್ರತಿ (Candidate copy) ಯನ್ನು ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದ್ದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಗಳು ಆಯೋಗಕ್ಕೆ ಒ.ಎಂ.ಆರ್. ಪ್ರತಿಯನ್ನು ನೀಡುವಂತೆ ಕೋರಿದ್ದಲ್ಲಿ ಅಂತಹ ಮನವಿಗಳನ್ನು ಪುರಸ್ಕರಿಸುವುದಿಲ್ಲ.


27. **ಪರೀಕ್ಷೆಯು ಮುಕ್ತಾಯವಾದ ನಂತರ ಅಭ್ಯರ್ಥಿಯು ತನ್ನ ಉತ್ತರಿಸಿದ ಒ.ಎಂ.ಆರ್. ಹಾಳೆಯ ರೆಪ್ಲಿಕಾ ಪ್ರತಿಯನ್ನು ತೆಗೆದಿರಿಸಿಕೊಂಡು ಮೂಲ ಒ.ಎಂ.ಆರ್. ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಂವೀಕ್ಷಕರಿಗೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ನೀವು ಹೊಣೆಗಾರರಾಗಿರುತ್ತೀರಿ.**

28. ಪ್ರವೇಶ ಪತ್ರವನ್ನು ಪಡೆದುಕೊಂಡ ಮಾತ್ರಕ್ಕೆ ಆಯೋಗವು ನಿಮ್ಮ ಅಭ್ಯರ್ಥಿತ್ವವನ್ನು ಒಪ್ಪಿಕೊಂಡಿದೆ ಎಂದು ಅರ್ಥವಲ್ಲ, ಏನಾದರೂ ತಪ್ಪುಗಳು ಕಂಡು ಬಂದಲ್ಲಿ ಯಾವ ಹಂತದಲ್ಲಾದರೂ ನಿಮ್ಮ ಅಭ್ಯರ್ಥಿತ್ವವನ್ನು ರದ್ದು ಮಾಡುವ ಅಧಿಕಾರವನ್ನು ಆಯೋಗವು ಹೊಂದಿರುತ್ತದೆ.

29. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಯಾವುದೇ ತರನಾದ ಚರ್ಚೆ ಮಾಡುವುದು ಅಥವಾ ಪರೀಕ್ಷಾ ಸಿಬ್ಬಂದಿಯೊಡನೆ ಅನುಚಿತವಾಗಿ ವರ್ತಿಸುವುದನ್ನು ನಿಷೇಧಿಸಿದೆ.

30. ಅಭ್ಯರ್ಥಿಯು OMR Sheet ನ ವೃತ್ತವನ್ನು ಪೂರ್ಣವಾಗಿ ಕಪ್ಪು ಬಾಲ್ ಪಾಯಿಂಟ್ ಪೆನ್ ನಿಂದ ಎನ್ ಕೋಡ್ ಮಾಡಬೇಕು ಉದಾ: 

31. ಅಭ್ಯರ್ಥಿಯು ವೃತ್ತವನ್ನು ಈ ಕೆಳಕಂಡ ರೀತಿಯಲ್ಲಿ ಎನ್ ಕೋಡ್ ಮಾಡಿದಲ್ಲಿ ಪರಿಗಣಿಸಲಾಗುವುದಿಲ್ಲ.

ಉದಾ: 

32. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 272 ಸೇನೆನಿ 2013 ದಿನಾಂಕ: 11-02-2021 ರಂತೆ ಅಂಧ / ದೃಷ್ಟಿಮಾಂದ್ಯ, ಚಲನವಲನ ವೈಕಲ್ಯ(ಎರಡೂ ತೋಳುಗಳು ಪೀಡಿತಗೊಂಡಂತಹ – BA) ಮತ್ತು ಮೆದುಳಿನ ಪಾರ್ಶ್ವವಾಯು – ಈ ಎದ್ದು ಕಾಣುವ ಅಂಗವಿಕಲತೆಯನ್ನು (Blindness, Locomotor Disability, Cerebral Palsy) ಹೊಂದಿರುವ ಅಭ್ಯರ್ಥಿಗಳು ಲಿಪಿಕಾರರ ಸಹಾಯವನ್ನು ಪಡೆಯಲು (ಅನುಬಂಧ-2) ರಲ್ಲಿಯೂ ಹಾಗೂ ಇತರೆ ಎದ್ದು ಕಾಣುವ ಅಂಗವಿಕಲತೆಯ (Other categories of bench mark disabilities) ಅಭ್ಯರ್ಥಿಗಳು ಲಿಪಿಕಾರರ ಸಹಾಯ ಪಡೆಯಬೇಕಾದ್ದಲ್ಲಿ, ನಿಗದಿತ ನಮೂನೆಯಲ್ಲಿ (ಅನುಬಂಧ-1) ಸಂಬಂಧಿತ ವೈದ್ಯಕೀಯ ಮಂಡಳಿಯಿಂದ ಪಡೆದ ದೃಢೀಕೃತ ಅಂಗವಿಕಲ ಪ್ರಮಾಣ ಪತ್ರವನ್ನು ಹಾಗೂ ಲಿಪಿಕಾರರ ಭಾವಚಿತ್ರ ಮತ್ತು ಗುರುತಿನ ಚೀಟಿ ಹಾಗೂ ಇತರೆ ವಿವರಗಳೊಂದಿಗೆ ದೃಢೀಕರಣವನ್ನು ನಿಗದಿತ ನಮೂನೆಯಲ್ಲಿ (ಅನುಬಂಧ-2) ಪಡೆದ ಮುಚ್ಚಳಿಕೆ ಪತ್ರವನ್ನು ಸದರಿ ಪರೀಕ್ಷೆಗೆ ಸಲ್ಲಿಸಿದ ಅರ್ಜಿಯ ಪ್ರತಿಯೊಂದಿಗೆ ಪರೀಕ್ಷಾ ಕೇಂದ್ರದಲ್ಲಿ ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ ಮತ್ತು ಲಿಪಿಕಾರರ ಸಹಾಯ ಕೋರಿರುವ ಮತ್ತು ಲಿಪಿಕಾರರ ಸಹಾಯ ಕೋರದೇ ಇರುವ ಅಂಗವಿಕಲ **ಅಭ್ಯರ್ಥಿಗಳಿಗೆ ಪ್ರತಿ ಒಂದು ಗಂಟೆಯ ಪರೀಕ್ಷೆಗೆ ಹೆಚ್ಚುವರಿಯಾಗಿ 20 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.** ಅಂಧ/ ಅಂಗವೈಕಲ್ಯ ಅಭ್ಯರ್ಥಿಗಳಾಗಲೀ ಅಥವಾ ಲಿಪಿಕಾರರಾಗಲೀ ಪರೀಕ್ಷಾ ಸಂಬಂಧ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅದಕ್ಕೆ ಸಂಪೂರ್ಣವಾಗಿ ಅಭ್ಯರ್ಥಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ. ಈ ಬಗ್ಗೆ ಪರೀಕ್ಷಾ ನಂತರ ಸ್ವೀಕೃತವಾಗುವ ಯಾವುದೇ ಮನವಿಗಳನ್ನು ಆಯೋಗವು ಪರಿಗಣಿಸುವುದಿಲ್ಲ.

33. ಅಭ್ಯರ್ಥಿಯು ತನಗೆ ಹಂಚಿಕೆ ಮಾಡಿದ ಪರೀಕ್ಷಾ ಉಪ ಕೇಂದ್ರ / ಸ್ಥಳದಲ್ಲಿಯೇ ಪರೀಕ್ಷೆ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

34. ಪರೀಕ್ಷೆಗೆ ನಿಗದಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ. ಪರೀಕ್ಷೆ ಮುಗಿಯಲು 30 ನಿಮಿಷಗಳು ಬಾಕಿಯಿರುವಾಗ ಯಾವುದೇ ಅಭ್ಯರ್ಥಿಯು ನೀರು ಕುಡಿಯಲು, ಶೌಚಾಲಯಕ್ಕೆ ಹೋಗಲು ಹಾಗೂ ಇನ್ನಿತರೆ ಯಾವುದೇ ಉದ್ದೇಶಗಳಿಗೂ ಕೊಠಡಿಯಿಂದ ಹೊರ ಹೋಗುವಂತಿಲ್ಲ.

35. ಅಭ್ಯರ್ಥಿಗಳು ಪ್ರಸ್ತುತ ಜಾರಿಯಲ್ಲಿರುವ ಕೇಂದ್ರ/ರಾಜ್ಯ ಸರ್ಕಾರದ ಕೋವಿಡ್-19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

36. ಅಭ್ಯರ್ಥಿಗಳು ಒ.ಎಂ.ಆರ್. ಉತ್ತರ ಹಾಳೆ, ಪ್ರವೇಶ ಪತ್ರ ಮತ್ತು ಪ್ರಶ್ನೆ ಪುಸ್ತಿಕೆಗಳಲ್ಲಿ ಸೂಚಿಸಲಾಗಿರುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಪರೀಕ್ಷೆಯು ಶಾಂತಿಯುತವಾಗಿ ನಡೆಯಲು ಸಹಕಾರ ನೀಡತಕ್ಕದ್ದು, ಈ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸುವುದೂ ಅಲ್ಲದೇ ಆಯೋಗವು ತೆಗೆದುಕೊಳ್ಳುವ ಯಾವುದೇ ಶಿಸ್ತು ಕ್ರಮಕ್ಕೆ ನೀವು ಹೊಣೆಗಾರರಾಗುತ್ತೀರಿ.

37. **ಅಂಗವಿಕಲ ಅಭ್ಯರ್ಥಿ ಮತ್ತು ಲಿಪಿಕಾರರಿಗೆ ವಿಶೇಷ ಸೂಚನೆಗಳು:** (ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 272 ಸೇನೆನಿ 2013 ದಿನಾಂಕ: 11-02-2021 ರಂತೆ)

a) ಆಯ್ಕೆ ಪ್ರಾಧಿಕಾರ/ಆಯೋಗವು ಲಿಪಿಕಾರರನ್ನು ಒದಗಿಸಿದಲ್ಲಿ ಆತನ ವಿದ್ಯಾರ್ಹತೆಯು ಪರೀಕ್ಷೆಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಗಿಂತ ಹೆಚ್ಚಿರಬಾರದು.

b) ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ.

c) ತನ್ನದೇ ಆದ ಲಿಪಿಕಾರರನ್ನು ಕರೆತರಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಿದಲ್ಲಿ ಅಂತಹ ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು ಸದರಿ ಅಭ್ಯರ್ಥಿಯು ಹೊಂದಿರುವ ವಿದ್ಯಾರ್ಹತೆಗಿಂತ ಒಂದು ಹಂತ ಕೆಳಗಿರಬೇಕು.

d) ಲಿಪಿಕಾರರ ಸೇವೆಯನ್ನು ಪಡೆಯಲು ಅನುಮತಿಸಲಾದ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗುವುದು.

e) ಅಭ್ಯರ್ಥಿಯು ಸ್ವತಃ ಕರೆತರುವ ಲಿಪಿಕಾರನ ದುರ್ನಡತೆಗೆ ಅಭ್ಯರ್ಥಿಯೆ ಜವಾಬ್ದಾರನಾಗಿರುತ್ತಾನೆ.

f) ಲಿಪಿಕಾರ ಹಾಗೂ ಅಭ್ಯರ್ಥಿಯ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು ಅಥವಾ ಅದೇ ಕೊಠಡಿಯಲ್ಲಿರುವ ಇತರೆ ಅಭ್ಯರ್ಥಿಗಳಿಗೆ ತೊಂದರೆ ಉಂಟು ಮಾಡುವಂತೆ ಇರಬಾರದು.

g) ಅಭ್ಯರ್ಥಿಗೆ ನೀಡಲಾಗಿರುವ ಇತರೆ ಪರೀಕ್ಷಾ ಸೂಚನೆಗಳನ್ನು ಲಿಪಿಕಾರನು ಸಹ ಪಾಲಿಸುವುದು ಕಡ್ಡಾಯವಾಗಿರುತ್ತದೆ.

**ದುರಾಚಾರ**

**ಅಭ್ಯರ್ಥಿಯು ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡು ಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೇ; ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು ಅಥವಾ ಆಯೋಗವು ನಡೆಸುವ ಪರೀಕ್ಷೆಗಳು ಅಥವಾ ಭಾರತದಲ್ಲಿನ ಇತರ ಲೋಕಸೇವಾ ಆಯೋಗಗಳು ನಡೆಸುವ ಪರೀಕ್ಷೆಗಳಿಂದ ಡಿಬಾರ್ ಮಾಡಲಾಗುವುದು.**

**ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಮಯದಲ್ಲಿ ಪರೀಕ್ಷೆಗೆ ಸಂಬಂಧಿಸಿದಂತೆ ಯಾವುದಾದರೂ ಗೊಂದಲ/ಸಮಸ್ಯೆ ಉಂಟಾದಲ್ಲಿ ಪರೀಕ್ಷೆ ನಡೆಯಲು ಯಾವುದೇ ರೀತಿಯ ಅಡಚಣೆ ಉಂಟು ಮಾಡದೇ, ಪರೀಕ್ಷೆ ಬರೆದು ಪರೀಕ್ಷೆ ಮುಕ್ತಾಯವಾದ ನಂತರದಲ್ಲಿ ಲಿಖಿತ ಮನವಿಯನ್ನು ಉಪಕೇಂದ್ರದ ಮುಖ್ಯಸ್ಥರಿಗೆ/ಆಯೋಗಕ್ಕೆ ನೀಡತಕ್ಕದ್ದು. ಪರೀಕ್ಷೆಯನ್ನು ನಡೆಸಲು ಅಡಚಣೆ ಉಂಟುಮಾಡುವ ಮತ್ತು ಗಲಾಟೆ/ಗಲಭೆ/ದೊಂಬಿ ಸೃಷ್ಟಿಸುವ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸುವುದೂ ಅಲ್ಲದೇ ಆಯೋಗವು ತಗೆದುಕೊಳ್ಳುವ ಯಾವುದೇ ಶಿಸ್ತು ಕ್ರಮಕ್ಕೆ ನೀವು ಹೊಣೆಗಾರರಾಗುತ್ತೀರಿ.**

ನೀಡಿರುವ ಸೂಚನೆಗಳನ್ನು ಓದಿಕೊಂಡಿದ್ದು, ಅವುಗಳನ್ನು ತಪ್ಪದೇ ಪಾಲಿಸುವೆನೆಂದು ದೃಢೀಕರಿಸುತ್ತಾ, ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಂಡಿರುತ್ತೇನೆ.


## ಕರ್ನಾಟಕ ಲೋಕಸೇವಾ ಆಯೋಗ / KARNATAKA PUBLIC SERVICE COMMISSION

ಅಧಿಸೂಚನೆ ಸಂಖ್ಯೆ : **ಪಿಎಸ್‌ಸಿ /509 ಇ(1) /2023-24** ದಿನಾಂಕ : **26/02/2024** ರಲ್ಲಿ ಅಧಿಸೂಚಿಸಿದ


**2023-24 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಬಿ ಹುದ್ದೆಗಳು** ನೇಮಕಾತಿಗಾಗಿ ನಡೆಸಲಿರುವ ಪೂರ್ವಭಾವಿ ಮರು ಪರೀಕ್ಷೆ.

# ಪ್ರವೇಶ ಪತ್ರ / Admission Ticket
# (GP-Prelims Re-Exam-2024)

ಎಲ್ಲಾ ಅಭ್ಯರ್ಥಿಗಳು ಪರೀಕ್ಷಾ ದಿನದಂದು ಪ್ರತೀ ಅಧಿವೇಶನದ ಪರೀಕ್ಷಾ ಪ್ರಾರಂಭವಾಗುವ 2.00 ಘಂಟೆಯ ಮೊದಲು ಹಾಜರಿರಬೇಕು. ಕಡ್ಡಾಯವಾಗಿ ಪರೀಕ್ಷಾ ಕೇಂದ್ರದ ಆವರಣದೊಳಗೆ ಮೊಬೈಲ್ ಫೋನ್, ಸ್ಮಾರ್ಟ್ ವಾಚ್, ಕ್ಯಾಲ್ಕುಲೇಟರ್ ಅಥವಾ ಇತರೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಹಾಗೂ ಅಭ್ಯರ್ಥಿಗಳು ತುಂಬು ತೋಳಿನ ವಸ್ತ್ರ ಮತ್ತು ಯಾವುದೇ ಆಭರಣಗಳನ್ನು (ಮಂಗಳ ಸೂತ್ರ ಕಾಲುಂಗುರ ಹೊರತುಪಡಿಸಿ) ಹಾಗೂ Pullovers, Jackets and Sweater ಗಳನ್ನು, ಶೂ, ಸಾಕ್ಸ್, ಬೆಲ್ಟ್ ಧರಿಸಿ ಹಾಜರಾಗುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಅಭ್ಯರ್ಥಿಯು ಪರೀಕ್ಷಾ ಆವರಣದೊಳಗೆ ಇವುಗಳನ್ನು ತೆಗೆದುಕೊಂಡು ಬಂದಲ್ಲಿ ಅಂತಹ ಅಭ್ಯರ್ಥಿಯನ್ನು ಪರೀಕ್ಷೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.

| | | |
|---|---|---|
|  | ನೋಂದಣಿ ಸಂಖ್ಯೆ / Register No. | 240869424 |
| | ಅಭ್ಯರ್ಥಿಯ ಹೆಸರು /Name of the Candidate | Manjunatha |
|  | ಕೇಂದ್ರದ ಸಂಖ್ಯೆ ಮತ್ತು ಹೆಸರು /Center Code and Name | (2)KALBURGI |
| ಅಭ್ಯರ್ಥಿಯ ವಿಳಾಸ /Candidate Permanent Address | S/O Ningappa Ramareddy Camp Raichur Karnataka-584128, , , 0 | |

| ಪರೀಕ್ಷಾ ದಿನಾಂಕ(Date of Examination) | ಪರೀಕ್ಷಾ ವೇಳೆ(Time of Examination) | ವಿಷಯ ಕೋಡ್ (Subject Code) | ವಿಷಯದ ಹೆಸರು (Subject Name) | ಉಪ ಕೇಂದ್ರದ ಸಂಕೇತ ಮತ್ತು ಹೆಸರು/ವಿಳಾಸ (Sub Centre Code & SubCentre Name/Address) | ಸಂವೀಕ್ಷಕರ ಸಹಿ(Invigilator's Signature) |
|---|---|---|---|---|---|
| 29 December 2024, (Sunday) | 10:00 AM To 12:00 PM | 589 | PAPER I | 29 - Sharnbasva University, SB Campus, Mechanical Department, Kalburgi-585103 | |
| 29 December 2024, (Sunday) | 2:00 PM To 4:00 PM | 590 | PAPER II | 29 - Sharnbasva University, SB Campus, Mechanical Department, Kalburgi-585103 | |



ಪರೀಕ್ಷಾ ನಿಯಂತ್ರಕರು/Controller of Examination

ಕರ್ನಾಟಕ ಲೋಕ ಸೇವಾ ಆಯೋಗ.

Content Owned & Maintained By **KARNATAKA PUBLIC SERVICE COMMISSION**, UDYOGA SOUDHA,BANGALORE – 560 001.
Telephone: 080-30574957 ; Fax: 080-22266481; Email:kpsc-ka[at]nic[dot]in ; S2